ಸಾಕ್ಷಿಯನ್ನು ದಿಃ 01.03.2019 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ

ನಾನು ಈ ದಿವಸ ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು, ಪ್ರಮಾಣಪತ್ರದಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ದಿಃ 14.08.1986 ರ ರಿಜಿಸ್ಟರ್ ಸೇಲ್ ಡೀಡ್ ನಂ. 608 ಅನ್ನು ನಿಡಿ. 84 ಎಂದು, ದಿಃ 14.08.1986 ರ ರಿಜಿಸ್ಟರ್ ಸೇಲ್ ಡೀಡ್ ನಂ. 609 ಅನ್ನು ನಿಡಿ. 85 ಎಂದು, ದಿಃ 02.05.1986 ರ ಭೂ ಪರಿವರ್ತನೆ ಆದೇಶದ ದೃಢೀಕೃತ ಪ್ರತಿಯನ್ನು ನಿಡಿ. 86 ಎಂದು, ದಿಃ 10.12.1985 ರ ವಸತಿ ಮತ್ತು ನಗರ ಇಲಾಖೆ ಆದೇಶದ ದೃಢೀಕೃತ ಪ್ರತಿಯನ್ನು ನಿಡಿ. 87 ಎಂದು, ( ಸದರಿ ನಿಡಿ. 86 ಮತ್ತು 87 ದಾಖಲೆಯನ್ನು ಈ ಸಾಕ್ಷಿ ದೃಢೀಕರಣ ಮಾಡಿದ್ದು ಅದನ್ನು ಗುರುತು ಮಾಡಲು ಬರುವುದಿಲ್ಲ ಎಂದು ವಾದಿ ಪರ ವಕೀಲರು ತಕರಾರು ಮಾಡಿದ್ದು, 1 ನೇ ಪ್ರತಿವಾದಿ ವಕೀಲರು ಸೆಕ್ಷನ್ 123(2) ಕೋ ಆಪರೇಟೀವ್ ಸೊಸೈಟಿ ಕಾಯಿದೆ ಅಡಿಯಲ್ಲಿ ಗುರುತು ಮಾಡಬಹುದು ಎಂದು ಹೇಳಿದ್ದು, ಸದರಿ ದಾಖಲೆಗಳ ಸರ್ಕಾರಿ ದೃಢೀಕೃತ ನಕಲು ಹಾಜರು ಪಡಿಸುವ ಮತ್ತು ವಾದಿಪರ ವಕೀಲರ ತಕರಾರಿಗೆ ಒಳಪಟ್ಟು ನಿಶಾನೆ ಆಗಿ ಗುರುತು ಮಾಡಿದೆ). ಓ.ಎಸ್ 117/1991 ರ ಮೇಮೋ ಆಫ್ ಇನ್ಸ್ಟ್ರಕ್ಷನ್ಸ್ ನ ದೃಢೀಕೃತ ನಕಲು ಪ್ರತಿಯನ್ನು ನಿಡಿ. 88 ಎಂದು, ಓ.ಎಸ್ 117/1991 ರ ಪ್ರತಿವಾದಿ 1 ರ ಮೇಮೋ ಆಫ್ ಇನ್ಸ್ಟ್ರಕ್ಷನ್ಸ್ ನ ದೃಢೀಕೃತ ನಕಲು ಪ್ರತಿಯನ್ನು ನಿಡಿ. 89 ಎಂದು, ಓ.ಎಸ್ 289/1996 ರ ಆದೇಶದ ದೃಢೀಕೃತ ನಕಲು ಪ್ರತಿಯನ್ನು ನಿಡಿ. 90 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ

ಸಮಯ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ,

ಸಹಿ/-

ಪ್ರಧಾನ ಲಘು ವ್ಯವಹಾರಗಳ ಮತ್ತು ಸಿವಿಲ್
ನ್ಯಾಯಾಧೀಶರು (ಹಿ.ವಿ.), ಮೈಸೂರು